ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ರಾಜ್ಯದಲ್ಲಿ ಲಾಕ್‌ಡೌನ್ ಸಮಯದಲ್ಲಿ ಸಂಗ್ರಹಿಸಿದ ಹಣದ ಖರ್ಚಿನ ಬಗ್ಗೆ

ಶ್ರೀ ಬಿ. ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು) :-

920 (1056) ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋವಿಡ್ ಕಾರಣದಿಂದ ಲಾಕ್‌ಡೌನ್ ಆದ ಸಂದರ್ಭದಲ್ಲಿ ರಾಜ್ಯದಲ್ಲಿ ಹಲವಾರು ಸಂಘ ಸಂಸ್ಥೆಗಳು ಹಣ ಸಂಗ್ರಹಿಸಿ ಆಹಾರ ಧಾನ್ಯ, ಮಾಸ್ಕ್ ವಿತರಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಲಾಕ್‌ಡೌನ್ ಸಂದರ್ಭದಲ್ಲಿ ಜನರೇ ಹೊರಬರಲಾಗದ ಸ್ಥಿತಿಯಲ್ಲಿ ಸಂಗ್ರಹಿಸಿದ ಹಣ ಎಷ್ಟು; ಖರ್ಚಾದ ಹಣ ಎಷ್ಟು; (ವಿವರ ನೀಡುವುದು)

(ಇ) ಹಣ ಸಂಗ್ರಹಿಸಿ ಆಹಾರ ಧಾನ್ಯ, ಮಾಸ್ಕ್ ರಾಜ್ಯವ್ಯಾಪಿ ಹಂಚಿದ ಪ್ರಮುಖ ಹಳೆಯದಾದ ಐದು ಸಂಘಟನೆಗಳ ಬಗ್ಗೆ ವಿವರವನ್ನು ನೀಡುವುದು; ಈ ಸಂಘಟನೆಗಳ ವಿರುದ್ಧ ಯಾವುದಾದರೂ ದೂರುಗಳು ಬಂದಿವೆಯೇ;

(ಈ) ವಿಳಾಸವೇ ಇಲ್ಲದ, ನೋಂದಣಿಯಾಗದ, ಸದಸ್ಯತ್ವದ ಪಟ್ಟಿ ಸಲ್ಲಿಸದ, ಸಂವಿಧಾನ ಬದ್ಧವಾಗಿ ಚುನಾವಣೆ ನಡೆಸದ, ಆದಾಯ ಖರ್ಚು ವೆಚ್ಚಗಳ ಬಗ್ಗೆ ಸರ್ಕಾರಕ್ಕೆ ಲೆಕ್ಕ-ಪತ್ರ ಸಲ್ಲಿಸದ ಸಂಘಟನೆಗಳ ವಿರುದ್ಧ ಕೈಗೊಂಡ ಕಾನೂನು ಕ್ರಮವೇನು?